ಇತರ ಐತಿಹಾಸಿಕ ಶಕ್ತಿಗಳ ಸ್ಪಷ್ಟವಾದ ಗ್ರಹಿಕೆಯೂ ಅವರಿಗಿತ್ತು. ಇತಿಹಾಸದುದ್ದಕ್ಕೂ ನಡೆದುಬಂದಿರುವ ಪಾತಕಗಳು ಅಂದರೆ, ಕೆಲವು ಪ್ರತಿಷ್ಠಿತ ಧನಿಕರಿಂದ ಬಡಜನರ ಶೋಷಣೆ, ಸಾಮಾಜಿಕ ದಬ್ಬಾಳಿಕೆಗಳು, ಮೇಲಾಗಿ ಬಡಜನರಲ್ಲೇ ಮನೆ ಮಾಡಿರುವ ಅನಕ್ಷರತೆ, ಮೂಢನಂಬಿಕೆಗಳು, ಅನಿಷ್ಟ ಸಾಮಾಜಿಕ ಪದ್ಧತಿಗಳು – ಇವೆಲ್ಲವುಗಳ ವಿರುದ್ಧ ಅವರು ಕುಪಿತರಾಗಿದ್ದರು. ಅವರು ಹೀಗೆ ಹೇಳುತ್ತಾರೆ: “ಭಾರತದ ಶ್ರಮಜೀವಿಗಳು ಸಾವಿರಾರು ವರ್ಷಗಳಿಂದ ಗೊಣಗಾಡದೆ ಕೆಲಸಮಾಡುತ್ತಾ ವಿವಿಧ ದೇಶಗಳ ಐಶ್ವರ್ಯವನ್ನು ಸೃಷ್ಟಿ ಮಾಡುತ್ತಿರುವರು. ಭರತಖಂಡದ ಶ್ರಮಜೀವಿಗಳ ಸಾವಿರಾರು ವರ್ಷಗಳ ಮೌನವಾದ ದುಡಿತದಿಂದ ಬ್ಯಾಬಿಲೋನಿಯಾ, ಪರ್ಷಿಯಾ, ಅಲೆಗ್ಸಾಂಡ್ರಿಯಾ, ಗ್ರೀಕ್, ರೋಮನ್, ವೆನಿಸ್. ಜಿನೀವಾ, ಬಾಗ್ದಾದ್, ಸ್ಪೈನ್, ಪೋರ್ಚುಗಲ್, ಫ್ರಾನ್ಸ್, ಡೆನ್ಮಾರ್ಕ್, ಹಾಲೆಂಡ್, ಇಂಗ್ಲೆಂಡ್ – ಇವುಗಳೆಲ್ಲ ಪ್ರವರ್ಧಮಾನಕ್ಕೆ ಬಂದವು. ಪ್ರಪಂಚದ ಪ್ರಗತಿಗೆ ಕಾರಣರಾದ ಇವರನ್ನು ಯಾರು ತಾನೇ ಲೆಕ್ಕಿಸುತ್ತಾರೆ!

**“...ಎಲ್ಲ ದೇಶಗಳಲ್ಲಿಯೂ ಇವರೇ ಜನಾಂಗದ ಬೆನ್ನುಮೂಳೆಯಾಗಿದ್ದಾರೆ. ಈ ನಿಮ್ನವರ್ಗದವರು ಕೆಲಸಮಾಡುವುದನ್ನು ಬಿಟ್ಟರೆ ನಿಮಗೆ ಊಟಬಟ್ಟೆಗಳು ಹೇಗೆ ತಾನೇ ಸಿಕ್ಕಬಲ್ಲವು? ಕೊಲ್ಕತಾದ ಜಾಡಮಾಲಿಗಳು ಒಂದು ದಿನ ಕೆಲಸ ನಿಲ್ಲಿಸಿದರೆ ಇಡೀ ಪಟ್ಟಣವೇ ಅಸ್ತವ್ಯಸ್ತವಾಗುವುದು. ಅವರು ಮೂರುದಿನ ಕೆಲಸ ನಿಲ್ಲಿಸಿದರೆ, ಸಾಂಕ್ರಾಮಿಕ ಜಾಡ್ಯದಿಂದ ಊರಿಗೆ ಊರೇ ಹಾಳಾಗುವುದು.”**

ನಿಜವಾಗಿ ನಮ್ಮ ಮುಂದೆ ಇರುವುದು ಒಂದೇ ಭಾರತವಲ್ಲ, ಎರಡು ಭಾರತಗಳು. ಈ ದೇಶದ ಬಡವರ ದುಡಿಮೆಯ ಸಂಪತ್ತೆಲ್ಲವನ್ನೂ ಕೊಳ್ಳೆಹೊಡೆದು ಎಲ್ಲೆಯಿಲ್ಲದ ಸುಖೋಪಭೋಗಗಳನ್ನು ಅನುಭವಿಸುತ್ತಿರುವ ವಿಲಾಸಿಗಳಿಂದ ಕೂಡಿದ ಭಾರತ ಒಂದು. ದಾರಿದ್ರ್ಯ ಅಜ್ಞಾನಗಳ ಕೂಪದಲ್ಲಿ ಕೊಳೆಯುತ್ತಿರುವ ಬಡಜನರ ಭಾರತ ಮತ್ತೊಂದು. ಒಂದು ಕಡೆ ತಾವು ಆಡಳಿತದಲ್ಲಿದ್ದ ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯಷಾಹಿಗಳು ಈ ದೇಶದ ಸಂಪತ್ತನ್ನು ಕೊಳ್ಳೆಹೊಡೆದು ಭೋಗಜೀವನ ನಡೆಸುವ ದೊರೆಗಳಾಗಿದ್ದರು; ಮತ್ತೊಂದೆಡೆ ಅದಕ್ಕೆ ಪೂರಕವೆಂಬಂತೆ ಮೂಲತಃ ಭಾರತದವರೇ ಆಗಿದ್ದ ಧನಿಕರು, ರಾಜರು ತಮ್ಮ ಬ್ರಿಟಿಷ್ ಧಣಿಗಳನ್ನು ಮೆಚ್ಚಿಸಲು, ಬೆವರು ಸುರಿಸಿ ಈ ದೇಶದ ಸಂಪತ್ತಿನ ಉತ್ಪಾದನಾ ಕಾರ್ಯದಲ್ಲಿ ತೊಡಗಿದ್ದ ತಮ್ಮದೇ ಆದ ದೇಶಬಾಂಧವರ, ಕಾರ್ಮಿಕವರ್ಗದವರ ರಕ್ತವನ್ನು ಹೀರುತ್ತಿದ್ದರು. ಇದು ಎಂತಹ ವಿಪರ್ಯಾಸ!

ತನ್ನ ಬೃಹತ್ ಜನಸಂಖ್ಯೆಯ ಐದರಷ್ಟು ಜನಸಂಖ್ಯೆಯನ್ನು ಸಾಕುವಷ್ಟು ಸಂಪನ್ಮೂಲಗಳನ್ನು ಭಾರತ ಆ ಕಾಲದಲ್ಲಿ ಹೊಂದಿತ್ತು. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ತಮ್ಮ ಎಲ್ಲೆಯಿಲ್ಲದ ದಾಹದಿಂದ, ಇಲ್ಲಿನ ಸಂಪತ್ತೆಲ್ಲವನ್ನೂ ದೋಚಿ, ಇಲ್ಲಿನ ಜನತೆ ಹಸಿವಿನಿಂದ ಸಾಯುವ ರೀತಿಯಲ್ಲಿ ತಮ್ಮ ಆಡಳಿತದ ಬಲೆಯನ್ನು ಬೀಸಿದ್ದರು. ಆ ಕಾಲದಲ್ಲಿ ಆಗಿಂದಾಗ್ಗೆ ತಲೆದೋರುತ್ತಿದ್ದ ಕ್ಷಾಮಗಳಿಂದ ಸತ್ತವರೆಷ್ಟು ಮಂದಿ ಎಂಬುದು ಸಹ ಲೆಕ್ಕಕ್ಕೇ ಸಿಗದಷ್ಟು ಪರಿಸ್ಥಿತಿ ಶೋಚನೀಯವಾಗಿತ್ತು.

ಬರೀ ಸಂಪತ್ತು ಮತ್ತು ದ್ರವ್ಯಗಳ ಲೂಟಿಯಷ್ಟೇ ಅಲ್ಲ, ಸಾಮಾನ್ಯ ಜನತೆಯನ್ನು ಅಜ್ಞಾನದಲ್ಲಿಯೇ ಕೊಳೆಯುವಂತೆ ಮಾಡಿದ ಬ್ರಿಟಿಷರ ವರ್ತನೆಯನ್ನು ಸ್ವಾಮೀಜಿಯವರು, “ಹಿಂದೆ ರಾಜರು ಸಾಮಾನ್ಯಜನತೆಯ ಶಿಕ್ಷಣಕ್ಕಾಗಿ ದತ್ತಿಕೊಟ್ಟಿದ್ದ ನೆಲವನ್ನೆಲ್ಲ ಕಬಳಿಸಿ, ಅನುಕೂಲಗಳನ್ನೆಲ್ಲ ಮೊಟಕುಗೊಳಿಸಿ, ನಾಮಕಾವಸ್ತೆಗೆ ಮಾತ್ರ ಶಿಕ್ಷಣಕ್ಕಾಗಿ ವ್ಯಯ ಮಾಡುತ್ತಿದ್ದರು” ಎಂಬ ತಮ್ಮ ಮಾತುಗಳಲ್ಲಿ ಗುರುತುಮಾಡಿ ತೋರಿಸುತ್ತಾರೆ. ವಿದ್ಯಾಭ್ಯಾಸದ ಅವನತಿಯಿಂದ ಉತ್ಪಾದನಾ ಸಾಮರ್ಥ್ಯವು ಕ್ಷೀಣಿಸುತ್ತದೆ. ಆ ಮೂಲಕ ಆರ್ಥಿಕ ಪರಿಸ್ಥಿತಿ ಹದಗೆಡುತ್ತದೆ. ಇವೆಲ್ಲದರ ಪರಿಣಾಮವೇ ಘನಘೋರ ಬಡತನ ಮತ್ತು ದಾರಿದ್ರ್ಯ.

**ಬಡತನದ ಸಮಸ್ಯೆಗೆ ಪರಿಹಾರೋಪಾಯಗಳು:** ಬಡಜನರ ಜೀವನೋಪಾಯಕ್ಕೆ ಅನುಕೂಲಗಳನ್ನು ಕಲ್ಪಿಸುವ ಕಾರ್ಯಯೋಜನೆಯ ರೂಪರೇಷೆಯನ್ನು ಸ್ವಾಮಿ ವಿವೇಕಾನಂದರ ಚಿಂತನೆಗಳಲ್ಲಿ ಅಲ್ಲಲ್ಲಿ ಕಾಣಬಹುದು. ಈ ಕಾರ್ಯಯೋಜನೆಯ ಹಿಂದಿನ ತಾತ್ವಿಕ ಪ್ರೇರಣೆಗಳು ಈ ನೆಲದ ಮಣ್ಣಿನಲ್ಲೇ ಆಳವಾಗಿ ಬೇರುಬಿಟ್ಟಿರುವ ಧಾರ್ಮಿಕ, ಆಧ್ಯಾತ್ಮಿಕ ಸಿದ್ಧಾಂತಗಳಲ್ಲಿಯೇ ಹುದುಗಿವೆ ಎಂದು ಸ್ವಾಮೀಜಿಯವರು ಪ್ರತಿಪಾದಿಸುತ್ತಾರೆ. ಮೇಧಾವಿಗಳೆನ್ನಿಸಿಕೊಂಡ ಅನೇಕರು, ಭಾರತದ ಬಡತನ, ಅನಕ್ಷರತೆ ಮತ್ತು ಅವನತಿ ಇವೆಲ್ಲಕ್ಕೂ ಇಲ್ಲಿನ ಧರ್ಮವನ್ನು ದೂರುವುದು ಆ ಕಾಲದಲ್ಲಿ ಮಾಮೂಲಾಗಿತ್ತು. ಈ ಬಗೆಯ ಆಲೋಚನೆಯು ಬಾಲಿಶವಷ್ಟೇ ಅಲ್ಲ, ಎಷ್ಟು ವಿಕೃತ ಎಂಬುದನ್ನು ತಿಳಿಸುತ್ತಾ ಸ್ವಾಮೀಜಿ ಹೀಗೆ ಹೇಳುತ್ತಾರೆ:

**“ಕೆಲವು ಬುದ್ಧಿಜೀವಿಗಳೆನ್ನಿಸಿಕೊಂಡವರು (ಈ ದೇಶದ ಅವನತಿಗೆ) ಸುಮ್ಮನೆ ನಮ್ಮ ಧರ್ಮವನ್ನು ದೂರುವರು. ಅವರ ಪ್ರಕಾರ, ಜನಸಾಧಾರಣರನ್ನು ಮೇಲಕ್ಕೆ ತರಲು ಇರುವ ಒಂದೇ ಮಾರ್ಗವೆಂದರೆ, ಪ್ರಪಂಚದ ಈ ಶ್ರೇಷ್ಠವಾದ ಧರ್ಮವನ್ನು ನಾಶಮಾಡುವುದು. ಭಗವಂತನ ದಯೆಯಿಂದ ನನಗೆ ಅದರ ರಹಸ್ಯ ಗೊತ್ತಾಗಿದೆ. ಧರ್ಮವಲ್ಲ ಅದಕ್ಕೆ ಕಾರಣ.”**

ಇದಕ್ಕೆ ಬದಲಾಗಿ ಸ್ವಾಮಿ ವಿವೇಕಾನಂದರು ಈ ದೇಶದ ಧರ್ಮ ಮತ್ತು ಆಧ್ಯಾತ್ಮಿಕ ಸಿದ್ಧಾಂತಗಳ ಅಂತರಾಳದಲ್ಲಿಯೇ, ಸಾಮಾಜಿಕ ಪರಿವರ್ತನೆಯ ಒಂದು ಶಕ್ತಿಯುತ ಸಾಧನವನ್ನು ಕಂಡುಕೊಂಡರು. ಈ ನಿಟ್ಟಿನಲ್ಲಿ ಧರ್ಮದ ಪರಿಕಲ್ಪನೆಯ ಪುನರ್ವ್ಯಾಖ್ಯಾನವನ್ನು ಮಾಡಿ, ಅದನ್ನು ಅನುಷ್ಠಾನಪರವನ್ನಾಗಿ ಮಾಡಿದರು. ಇದೇ ಅವರ ಒಂದು ಅದ್ವಿತೀಯ ಸಾಧನೆ.

ಭಾರತ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಧರ್ಮದ ಪಾತ್ರ ಮಹತ್ವದ್ದು ಎನ್ನುತ್ತಾ, “ಯಾವುದೇ ಧರ್ಮವು ಎಂದಾದರೂ ಯಶಸ್ವಿಯಾಗಿದೆ ಎಂದರೆ ಅದರಲ್ಲಿ ಆರ್ಥಿಕ ಮೌಲ್ಯವಿರಲೇಬೇಕು” ಎಂದು ಸ್ವಾಮೀಜಿ ಹೇಳುತ್ತಾರೆ. ವಿವೇಕಾನಂದರ ಈ ಆಲೋಚನಾ ಧಾಟಿ ವಿನೂತನವೆನಿಸಿದರೂ, ಆಧುನಿಕ ಆರ್ಥಿಕ ಪಂಡಿತರಾದ ಮ್ಯಾಕ್ಸ್ ವೆಬರ್, ಎಂ.ಸಿಂಗರ್ ಮುಂತಾದವರು ಇದೇ ಅಭಿಪ್ರಾಯವನ್ನು ಹೊಂದಿದ್ದರು ಎನ್ನುವುದನ್ನು ನಾವು ಗಮನಿಸಬೇಕು. ಈ ವಿದ್ವಾಂಸರು ಪ್ರತಿಪಾದಿಸಿದ ಧರ್ಮ ಮತ್ತು ಆರ್ಥಿಕ ಅಭಿವೃದ್ಧಿಗಳ ಮಾದರಿಯನ್ನು ಈ ಮುಂದಿನ ರೀತಿ ಗುರುತಿಸಬಹುದು:

**ಧಾರ್ಮಿಕ ಚಿಂತನೆಗಳು ಹಾಗೂ ವ್ಯಾಖ್ಯೆಗಳು -> ಜನರಲ್ಲಿ ಮೌಲ್ಯಪ್ರಜ್ಞೆಯ ಜಾಗೃತಿ ಹಾಗೂ ಮನೋಭಾವದಲ್ಲಿ ಉಂಟಾಗುವ ಪರಿವರ್ತನೆ -> ಶ್ರೇಷ್ಠವಾದ ಕ್ರಿಯಾಶೀಲತೆ ಹಾಗು ಕಾರ್ಯಕ್ಷಮತೆ -> ಸಾಂಸ್ಥಿಕ ಬದಲಾವಣೆಗಳು -> ಆರ್ಥಿಕ ಅಭಿವೃದ್ಧಿ.** ಇವೆಲ್ಲ ಒಂದಕ್ಕೊಂದು ತಳಕು ಹಾಕಿಕೊಂಡಿವೆ.

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ವಿವೇಕಾನಂದರೂ ಇಂತಹುದೇ ಒಂದು ಮಾದರಿಯನ್ನು ನಮ್ಮ ಮುಂದಿಡುತ್ತಾರೆ ಎಂಬುದು. ಶಂಕರ, ಚೈತನ್ಯ, ರಾಮಾನುಜ, ದಾದು, ನಾನಕ ಮತ್ತು ಕಬೀರರು ಪ್ರತಿಪಾದಿಸಿದ ಸರ್ವಸಮಾನತೆಯ ಕ್ರಿಯಾಶೀಲವಾದ ತಾತ್ತ್ವಿಕ ನೆಲೆಗಟ್ಟುಗಳು ನಮ್ಮ ಸಮಾಜವನ್ನು ಪುನಶ್ಚೇತನಗೊಳಿಸುವ ಮೌಲ್ಯಗಳೇ ಆಗಿದ್ದವು. ಅದರಲ್ಲೂ ಭಗವದ್ಗೀತೆಯ ಉಪದೇಶಗಳು ಜನರಲ್ಲಿ ಮೌಲ್ಯಪ್ರಜ್ಞೆಯನ್ನು ಕೆರಳಿಸಿ, ಕ್ರಿಯಾಶೀಲತೆ ಮತ್ತು ಕಾರ್ಯಕ್ಷಮತೆಗಳನ್ನು ಹೆಚ್ಚಿಸಿ ಸಮಾಜದ ಆಮೂಲಾಗ್ರ ಬೆಳವಣಿಗೆಗೆ ಕಾರಣವಾಗುತ್ತವೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಆರ್ಥಿಕವಲ್ಲದ ಅಂಶಗಳು ಅಂದರೆ ಅಧ್ಯಾತ್ಮ, ಸಾಮಾಜಿಕವ್ಯವಸ್ಥೆ, ಮೌಲ್ಯಪ್ರಜ್ಞೆ, ಜನರ ಮನೋಧರ್ಮ ಮುಂತಾದವು ಆರ್ಥಿಕವಾದ ಅಂಶಗಳ – ಅಂದರೆ ಬಂಡವಾಳ ಸಂಚಯ, ತಾಂತ್ರಿಕ ಕ್ರಾಂತಿ ಮುಂತಾದುವುಗಳಿಂದ ಉಂಟಾಗುವ ಆರ್ಥಿಕ ಅಭಿವೃದ್ಧಿಗೆ ಪರೋಕ್ಷವಾಗಿ ಕಾರಣವಾಗುತ್ತವೆ. ಇದೊಂದು ಐತಿಹಾಸಿಕ ಸತ್ಯ.

ಭಾರತೀಯ ಇತಿಹಾಸದಲ್ಲಿ ಕಂಡುಬರುವ ಸಾಮಾಜಿಕ ಹಾಗೂ ಆರ್ಥಿಕ ಕ್ರಾಂತಿಯಲ್ಲಿ ಸ್ವಾಮಿ ವಿವೇಕಾನಂದರು ಎರಡು ಹಂತಗಳನ್ನು ಗುರುತಿಸುತ್ತಾರೆ: ಮೊದಲನೇ ಹಂತವೇ **ಧಾರ್ಮಿಕ ಪುನರುತ್ಥಾನ** ಅಂದರೆ ವ್ಯಕ್ತಿಗಳ ಬದುಕನ್ನು ಪುನರ್‌ರೂಪಿಸುವ ನೈತಿಕ ಕ್ರಾಂತಿ. ಎರಡನೆಯ ಹಂತವೇ **ವಿಶೇಷ ಸವಲತ್ತುಗಳ ನಿರ್ಮೂಲನೆ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಜನರ ಆಚಾರವಿಚಾರಗಳಲ್ಲಾಗುವ ಪರಿವರ್ತನೆ.** ಆಧ್ಯಾತ್ಮಿಕ ಮತ್ತು ಸಾಮಾಜಿಕ ಪರಿವರ್ತನೆಯು ವ್ಯಕ್ತಿಗಳಲ್ಲಿ ಸೃಜನಶೀಲತೆಯನ್ನು ಅರಳುವಂತೆ ಮಾಡುತ್ತದೆ; ಆ ಮೂಲಕ ಭೌತಿಕ ಅಭಿವೃದ್ಧಿ, ಕಲಾತ್ಮಕತೆ, ವಿಜ್ಞಾನದ ಮುನ್ನಡೆ ಆಗುತ್ತದೆ; ಅದೇ ಸಮಾಜದ ಸರ್ವತೋಮುಖವಾದ ಪ್ರಗತಿಗೆ ಬುನಾದಿಯಾಗುತ್ತದೆ. ಇಂತಹ ಒಂದು ಕ್ರಾಂತಿ ಇದ್ದಕ್ಕಿದ್ದಂತೆ ಆಗುವಂಥದ್ದಲ್ಲ. ಬದಲಾಗಿ ಸಮಾಜದ ಎಲ್ಲ ಮಜಲುಗಳಲ್ಲಾಗುವ ಪರಿವರ್ತನೆಯಿಂದ ಮಾತ್ರವೇ ಇದು ಸಾಧ್ಯ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೀಗೆ ಘೋಷಿಸಿದ್ದು: "ಸುಧಾರಣೆಯನ್ನು (reform) ನಾನು ನಂಬುವವನಲ್ಲ, ಬದಲಾಗಿ ವಿಕಾಸ, ಬೆಳವಣಿಗೆಯಲ್ಲಿಯೇ ನನ್ನ ನಂಬಿಕೆ." ಸಮಾಜದ ಓರೆಕೋರೆಗಳನ್ನೆಲ್ಲ ಸರಿಪಡಿಸುವ ಧೋರಣೆಯೇ ಸಾಮಾನ್ಯ ಸುಧಾರಕನದು. ಅದಕ್ಕೆ ಬದಲಾಗಿ, ವಿವೇಕಾನಂದರ ಚಿಂತನೆಗಳು, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಕ್ರಾಂತಿಗಳೆಲ್ಲವೂ ಒಳಗೊಂಡ ಆಮೂಲಾಗ್ರ ಪರಿವರ್ತನೆಯನ್ನೇ ಧ್ಯೇಯವಾಗಿರಿಸಿಕೊಂಡಿವೆ. ಅಶ್ವತ್ಥವೃಕ್ಷ ನಿಧಾನವಾಗಿಯೇ ಬೆಳೆಯುತ್ತದೆ. ಅದು ಬೆಳೆದ ಹಾಗೆಲ್ಲ, ಅದಕ್ಕೆ ಅಂಟಿಕೊಂಡ ಮುಳ್ಳಿನಗಿಡ ತಾನಾಗಿಯೇ ಸತ್ತುಹೋಗುತ್ತದೆ. ಹಾಗೆಯೇ ಧನಾತ್ಮಕ ಅಂಶಗಳು ಸಮಾಜದಲ್ಲಿ ಪಸರಿಸಿದಂತೆಲ್ಲಾ, ಋಣಾತ್ಮಕವಾದ ಅಂಶಗಳು ತಮ್ಮ ಅವನತಿಯನ್ನು ತಾವೇ ತಾನಾಗಿ ಹೊಂದುತ್ತವೆ. ಇದು ಸ್ವಾಮಿ ವಿವೇಕಾನಂದರ ದೃಷ್ಟಿ. **(ಮುಂದುವರಿಯುವುದು)**

## ಸ್ನೇಹಪ್ರಭ

**ಆಧುನಿಕ ಉದ್ಯೋಗ ಕ್ಷೇತ್ರದಲ್ಲಿ ಹಲವಾರು ರೀತಿಯ ಒತ್ತಡಗಳನ್ನು ಅನುಭವಿಸಬೇಕಾಗುತ್ತದೆ. ಜೀವನದ ಗತಿ ಅತಿ ವೇಗವಾಗಿ ಇರುತ್ತದೆ. ಯಶಸ್ಸು ಗಳಿಸಬೇಕಾದರೆ ಸ್ವಂತ ಸುಖ, ನೆಮ್ಮದಿ, ಆರೋಗ್ಯಗಳನ್ನೂ ಬಲಿಕೊಡಬೇಕಾಗುತ್ತದೆ. ಇದಕ್ಕೆ ಪರಿಹಾರ ಏನು?**

ಯಾವುದು ಯಶಸ್ವೀ ಜೀವನ ಎಂಬುದರ ಕಡೆಗೆ ಸ್ವಲ್ಪ ಗಮನ ಹರಿಸಬೇಕು. ಅಪಾರ ಧನಸಂಪಾದನೆಯಾಗಲಿ, ಉನ್ನತ ಹುದ್ದೆ ಅಧಿಕಾರಗಳಾಗಲಿ, ಪ್ರಾಪಂಚಿಕ ಸುಖಸೌಲಭ್ಯಗಳನ್ನು ಪಡೆಯುವುದಾಗಲಿ, 'ಜೀವನದ ಯಶಸ್ಸು' ಎಂದು ಕರೆಯಲು ಆಗುವುದಿಲ್ಲ. ಉನ್ನತ ನೈತಿಕಪ್ರಜ್ಞೆ, ಉತ್ತಮ ಮಾನವೀಯ ಸಂಬಂಧ ಮತ್ತು ಸಾರ್ಥಕತೆ – ಇವು ಯಶಸ್ವೀ ಜೀವನದ ಹೆಗ್ಗುರುತುಗಳು. ಉನ್ನತ ನೈತಿಕಪ್ರಜ್ಞೆಯಿಂದ ನಾವು ನಿಃಸ್ವಾರ್ಥಿಗಳಾಗುತ್ತೇವೆ ಮತ್ತು ಅದರಿಂದ ನಮ್ಮಲ್ಲಿ ಮಾನವೀಯತೆ ಜಾಗೃತವಾಗುತ್ತದೆ. ಇದರಿಂದ ನಮಗೆ ಸಿದ್ಧಿಸುವ ಉದಾತ್ತ ಜೀವನ ನಮಗೆ ಸಾರ್ಥಕತೆಯ ಹಾಗೂ ಧನ್ಯತೆಯ ಭಾವವನ್ನು ನೀಡುತ್ತದೆ. ಇಂತಹ ಧನ್ಯತೆಯ ಜೀವನವೇ ಯಶಸ್ವೀ ಜೀವನ. ಮಾನವನು ಒಬ್ಬ ವ್ಯಕ್ತಿಯಾಗಿ ಸಮಾಜದ ಇತರರೊಡನೆಯೂ, ಅಂತರಂಗದಲ್ಲಿ ತನ್ನ ವ್ಯಕ್ತಿತ್ವದ ಹಲವಾರು ಅಂಶಗಳೊಡನೆಯೂ ಸಾಮರಸ್ಯದಿಂದ ಬಾಳುವುದೇ ನಿಜವಾದ ಯಶಸ್ಸು.

ಈ ಆದರ್ಶವನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಜೀವನ ನಿರ್ವಹಣೆಯನ್ನು ಮಾಡಿದರೆ ಒತ್ತಡಗಳ ದುಷ್ಪರಿಣಾಮಗಳಿಂದ ನಾವು ಮುಕ್ತರಾಗಿರಬಹುದು. ಜೀವನದಲ್ಲಿ ಒತ್ತಡಗಳು ಅನಿವಾರ್ಯ. ಈಗ ತ್ವರಿತಗತಿಯಲ್ಲಿ ಸಮಾಜ ಬದಲಾಗುತ್ತಿರುವುದರಿಂದ, ಒಂದು ಪರಿಸ್ಥಿತಿಗೆ ಹೊಂದಿಕೊಳ್ಳುವಷ್ಟರಲ್ಲಿಯೇ ಆ ಪರಿಸ್ಥಿತಿ ಬದಲಾಗಿರುವುದರಿಂದ, ನಿರಂತರ ಒತ್ತಡವನ್ನು ಅನುಭವಿಸುವಂತಾಗಿದೆ. ಅಂದರೆ ಒತ್ತಡದ ಪ್ರಮಾಣ ಜಾಸ್ತಿಯಾಗಿಲ್ಲ, ಅದರ ಅನುಭವ ಜಾಸ್ತಿಯಾಗಿದೆ. ಒಂದೇ ಬಗೆಯ ಹೊರೆಯನ್ನು ಹೊತ್ತುಕೊಂಡು ಹೋಗುತ್ತಿರುವಾಗ ಅದರ ಭಾರ ನಮ್ಮ ಗಮನಕ್ಕೆ ಅಷ್ಟು ಬಾರದಿರಬಹುದು. ಆದರೆ ಆ ಹೊರೆ ಮತ್ತೆ ಮತ್ತೆ ಬದಲಾಗುತ್ತಿದ್ದರೆ ಅದರ ಭಾರದ ಅರಿವಾಗುವುದು ಸ್ವಾಭಾವಿಕ. ಇಂದಿನ ದಿನಗಳಲ್ಲಿ ಪ್ರಚಾರದಲ್ಲಿರುವ ಒತ್ತಡ ವಿಚಾರವೇ, ಜನರಲ್ಲಿ ಒತ್ತಡದ ಅರಿವನ್ನು ಹೆಚ್ಚಿಸಿ ಜನರು ಅದರಿಂದ ನರಳುವಂತೆ ಮಾಡುತ್ತಿದೆ.

ನಾವು ಒತ್ತಡಗಳಿಗೆ ಒಳಗಾಗದೇ ಇರಬೇಕಾದರೆ ಆಂತರಿಕ ದೃಢತೆ ಆವಶ್ಯಕ. ಹೊರಗಿನ ಸನ್ನಿವೇಶಗಳ ಮೇಲೆ ನಮಗೆ ಹತೋಟಿ ಇಲ್ಲದಿರುವುದರಿಂದ ನಮ್ಮಲ್ಲಿ ಬದಲಾವಣೆಯನ್ನು ತಂದುಕೊಳ್ಳಬೇಕು. ಇದಕ್ಕೆ ಹಿಂದೆ 'ವಿವೇಕಪ್ರಭ' ದಲ್ಲಿ ಪ್ರಕಟವಾದ 'ಒತ್ತಡ ನಿವಾರಣೆ' (ವಿವೇಕಪ್ರಭ, ಸೆಪ್ಟೆಂಬರ್ ೨೦೦೩, ಸಂಪಾದಕೀಯ) ಎಂಬ ಲೇಖನವನ್ನು ಓದಿ. (**ಬರಹ: ಸ್ವಾಮಿ ನಿತ್ಯಸ್ಥಾನಂದ**)



# ಆದ್ಯತೆಗಳಿಂದ ವಿಮುಖವಾದ ಆರ್ಥಿಕ ಕಲಾಪಗಳು

ಎಸ್. ಆರ್. ರಾಮಸ್ವಾಮಿ

**ರಾಜಕೀಯದಲ್ಲಿ ಪ್ರಜಾಪ್ರಭುತ್ವ ತತ್ತ್ವವನ್ನು, ಎಂದರೆ ಸರ್ವಸಮಾನತೆಯನ್ನು ಭಾರತ ಅಂಗೀಕರಿಸಿದೆ. ಆದರೆ ಕಳೆದೆರಡು ದಶಕಗಳ ಆರ್ಥಿಕ ಧೋರಣೆಗಳೆಲ್ಲ ಶ್ರೀಮಂತವರ್ಗಗಳ ಹಿತವನ್ನು ಪೋಷಿಸುವಂಥವೇ ಆಗಿವೆ. ಈ ವೈರುಧ್ಯ ರಾಷ್ಟ್ರದ ಪ್ರಗತಿಗೆ ಪ್ರತಿಕೂಲಕರವೆಂಬುದು ಸ್ಪಷ್ಟವಾಗಿದೆ. ಯುಕ್ತ ಮಾಹಿತಿಗಳು ಮತ್ತು ವಿಶಿಷ್ಟ ವಿಶ್ಲೇಷಣೆಗಳ ಮೂಲಕ ಈ ವಿಷಯವನ್ನು ನಮಗೆ ಮನವರಿಕೆ ಮಾಡಿಕೊಟ್ಟಿರುವ ಮಾನ್ಯ ಲೇಖಕರು ಕನ್ನಡದ ಪ್ರತಿಷ್ಠಿತ ಮಾಸಪತ್ರಿಕೆ 'ಉತ್ಥಾನ'ದ ಗೌರವಸಂಪಾದಕರು; ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಪರಿಣತರು.**

**ದಾ**ದಾ ವಾಸ್ವಾನಿಯವರೊಮ್ಮೆ ನಡುರಾತ್ರಿಯಲ್ಲಿ ನಗರಜೀವನ ಹೇಗಿರುತ್ತದೆಂದು ನೋಡಲು ಹೊರಟರು. ಜೊತೆಯಲ್ಲಿ ಕೆಲವು ಕಂಬಳಿ-ಬೆಡ್‌ಶೀಟುಗಳನ್ನು ಒಯ್ದರು. ಅದು ಥಂಡಿಕಾಲ. ಚಳಿಗೆ ಮೈ ನಡುಗುತ್ತಿತ್ತು. ಆದರೆ ಮೇಲುಹೊದಿಕೆಯೂ ಇಲ್ಲದೆ ರಸ್ತೆಬದಿಯಲ್ಲಿ ಹತ್ತಾರು ಮಂದಿ ಮಲಗಿದ್ದುದನ್ನು ಕಂಡರು. ಒಂದೆಡೆ ಹಣ್ಣುಹಣ್ಣು ಮುದುಕನೊಬ್ಬ ಮಲಗದೆ ಕಾಲುಗಳನ್ನು ಮಡಿಚಿಕೊಂಡು ಮುದುರಿ ಕುಳಿತಿದ್ದುದನ್ನು ನೋಡಿದರು. ಆತ ಎಚ್ಚರವಿದ್ದುದರಿಂದ ಅವನನ್ನು ಕುರಿತು ದಾದಾ ಕೇಳಿದರು: "ಅಜ್ಜಾ, ಇಷ್ಟು ಹೊತ್ತಾದರೂ ಮಲಗದೆ ಏಕೆ ಹೀಗೆ ಕುಳಿತಿದ್ದೀರಿ?" ಮುದುಕ ಹೇಳಿದ: "ಅಪ್ಪಾ, ಮಲಗಿದರೆ ಮೈ ನೆಲಕ್ಕೆ ತಾಗಿ ಥಂಡಿಯಾಗುತ್ತದೆ, ಅಷ್ಟು ಥಂಡಿ ನಾನು ತಡೆಯಲಾರೆ. ಆದ್ದರಿಂದ ಮಂಡಿಯನ್ನು ತಲೆಯ ಹತ್ತಿರಕ್ಕೆಳೆದುಕೊಂಡು ಕುಳಿತಿದ್ದೇನೆ. ಬೆಳಗು ಮೂಡಿ ಸೂರ್ಯ ಬಂದಾಗ ಬೆಚ್ಚಗಾಗಿ ನನ್ನ ಮೈಮೂಳೆಗಳಿಗೆ ಸ್ವಲ್ಪ ಹಿತವಾಗುತ್ತದೆ. ಅಲ್ಲಿಯವರೆಗೆ ಹೀಗೆಯೇ ಕುಳಿತುಕೊಂಡಿರದೆ ಬೇರೆ ಉಪಾಯವಿಲ್ಲ." ಇದನ್ನು ಕೇಳಿ ಕಂಬನಿದುಂಬಿದ ದಾದಾ ಆತನ ಮೈಮೇಲೊಂದು ಹಚ್ಚಡ ಹೊದಿಸಿ ಪ್ರಾರ್ಥನೆ ಮಾಡಿದರು: **"ಭಗವಂತ, ಇಂಥವರ ಬವಣೆ ನೀಗುವುದು ಯಾವಾಗ? ದಯವಿಟ್ಟು ಕರುಣೆ ತೋರು."**

ಇದು ನಡೆದದ್ದು ಐವತ್ತು ವರ್ಷಗಳ ಹಿಂದೆ. ಆದರೆ ಆ ವೃದ್ಧನಂಥವರನ್ನು ಈಗಲೂ ನಡುರಾತ್ರಿಯಲ್ಲಿ ಬೆಂಗಳೂರಿನಂಥ ಬೃಹನ್ನಗರದ ಮೂಲೆಗಳಲ್ಲಿ ನಾವು ಕಾಣಬಹುದು. ನಾನಾ ಅಭಿವೃದ್ಧಿ ಯೋಜನೆಗಳಿಂದ ವಂಚಿತರಾದ ಅಂಥ ಲಕ್ಷಾಂತರ ಮಂದಿ ನಮ್ಮ ನಾಡಿನಲ್ಲಿದ್ದಾರೆ. ಬೇರೆ ದಾರಿ ಕಾಣದೆ ಭಿಕ್ಷುಕವೃತ್ತಿಯನ್ನು ಅವಲಂಬಿಸಿರುವವರ ಸಂಖ್ಯೆ ಇಡೀ ಜಗತ್ತಿನಲ್ಲಿ ೮ ಕೋಟಿಗೂ ಹೆಚ್ಚು ಇದೆ.

ಎಷ್ಟೋ ಪಂಚವಾರ್ಷಿಕ ಯೋಜನೆಗಳು ಆಗಿಹೋದವು. ಸ್ವರ್ಗವನ್ನು ಧರೆಗಿಳಿಸುತ್ತೇವೆಂದು ಬಂದೆರಗಿದ ಜಾಗತೀಕರಣದ ಎರಡು ದಶಕಗಳೂ ಮುಗಿದು ಹೋದವು. ಆದರೆ ಈ ಎಲ್ಲ ಯೋಜನೆಗಳಲ್ಲಿ ಯಾವ ಸ್ತರದವರ ಏಳ್ಗೆಗೆ ಆದ್ಯತೆ ಸಲ್ಲಬೇಕಾಗಿತ್ತೋ ಅವರ ಸ್ಥಿತಿ ಹಿಂದಿನಂತೆಯೆ ಇದೆ. ಹೊಸಹೊಸ ಪರಿಭಾಷೆಯ ಮತ್ತು ಅಂಕಿ-ಸಂಖ್ಯೆಗಳ ತಾಂಡವವಷ್ಟೆ ನಡೆದಿದೆ.

## ವಿಪರ್ಯಾಸ ಸರಣಿ

ದೇಶದ ಒಟ್ಟು ಉತ್ಪಾದನೆ, ಹಣದ ಚಲಾವಣೆ ಮೊದಲಾದ ಅಂಶಗಳನ್ನು ಆಧರಿಸಿ, ಪ್ರಗತಿಯಾಗುತ್ತಿದೆ ಎಂದು ಘೋಷಿಸುವ ಪರಿಪಾಟವಿದೆ. ಆದರೆ ಈ ವಿಷಯಕ್ಕೆ ಇನ್ನೊಂದು ಮುಖವೂ ಉಂಟು. ಉದಾಹರಣೆಗೆ, ೧೯೫೨ರಲ್ಲಿ ಇದ್ದುದಕ್ಕಿಂತ ಆಹಾರೋತ್ಪಾದನೆ ಈಗ ನಾಲ್ಕುಪಟ್ಟು ಏರಿದೆಯೆಂದು ಹೇಳಲಾಗುತ್ತದೆ. ಆದರೆ ಇದೇ ಅವಧಿಯಲ್ಲಿ ಪ್ರತಿ ವ್ಯಕ್ತಿಯ ಆಹಾರಧಾನ್ಯಗಳ ಸರಾಸರಿ ಬಳಕೆ ೧೯೫೨ರಲ್ಲಿ ದಿವಸಕ್ಕೆ ೧೧೬ ಗ್ರಾಂ ಇದ್ದದ್ದು ಈಗ ೬೦ಗ್ರಾಂಗೂ ಕಡಮೆಯಾಗಿದೆ. ಇದನ್ನು ಪ್ರಗತಿಯೆಂದು ಕರೆಯಲಾದೀತೆ?